

ಒರಿಮೈ ತಣ್ಣಗೆ, ಮನದಲಿ ಬಿಸಿ ಹಗೆ.
ಎರಡೆಳೆ ನಾಲಗೆ ಇದ್ದರು ಸುಮ್ಮಗೆ
ಎರಗುವೆ ನಿನಗೆ, ಈಗಲೆ ಹೊರಗೆ
ಪೋ ಪೋ ಪೋ ಪೋ, ಪೋ ಪೋ ಪೋ

★★★

ಇಷ್ಟೇ ಹೇಳಿ ಬಿಟ್ಟರೆ ಇದು ಕೂಡಾ ಜೈನರ ಅನೇಕಾಂತ ವಾದದ ಏಳು 'ನಯ'ಗಳಲ್ಲಿ ಒಂದಾದೀತು. ತಮ್ಮ ವಿನಯದಿಂದ ಬ್ರಿಟಿಷರನ್ನು ಮಣಿಸಿದ ಗಾಂಧೀಜಿಯ ನಿದರ್ಶನ ನಮ್ಮ ಮುಂದಿರುವಾಗ, ನಯದ ಸದ್ಬಳಕೆಯ ಅಂಶವನ್ನು ನಾವು ಕಡೆಗಣಿಸಲು ಸಾಧ್ಯವೇ? ಗುರುಹಿರಿಯರೆದುರು ತೋರಬೇಕಾದ ನಮ್ರತೆ. ತುಂಬಿದ ಕೊಳ ತುಳುಕಬಾರದೆಂಬ ಆಸ್ಥೆ ಇವುಗಳನ್ನೆಲ್ಲ ಯಾವ ಪ್ರವರ್ಗಕ್ಕೆ ಸೇರಿಸುವುದು?

ಅದೆಲ್ಲ ಇರಲಿ. ನಾವಿಂದು ಮಕ್ಕಳಿಗೆ ಹೇಳಿಕೊಡುತ್ತಿರುವುದೇನು? ರಸ್ತೆಯಲ್ಲಿ ನಡೆಯುವಾಗ ಜೋರಾಗಿ ಮಾತನಾಡಿದರೆ 'ಶ್! ಮೆಲ್ಲ... ಮೆಲ್ಲ...' ಎನ್ನುವುದು, ನೀರು ಕುಡಿಯುವಾಗ 'ಗಟಗಟ ಸದ್ದೇಕೆ ಮಾಡುತ್ತೀ?...' 'ಹಾಲು ಕುಡಿದ ತುಟಿ ನೋಡು ಬೆಳ್ಳಗಾಗಿದೆ...' 'ಥೋ, ಅದನ್ನೇಕೆ ಅಂಗಿಯ ತುದಿಯಿಂದ ಒರೆಸಿಕೊಳ್ಳುತ್ತಿರುವೆ...' ಇವೆಲ್ಲ, 'ಮ್ಯಾನ್'ನನ್ನು 'ಜಂಟಲ್ ಮ್ಯಾನ್' ಆಗಿಸುವ ತಯಾರಿಯೇ ತಾನೆ? ಮನುಷ್ಯನನ್ನು ಆತನ ಸಹಜ ಪ್ರಾಕೃತಿಕ ಗುಣಗಳಿಂದ ವಿಮುಖನಾಗಿಸುವ ನಮ್ಮ ಪ್ರಯತ್ನದ ಹಿಂದಿನ ಉದ್ದೇಶವೇನು? ಹಾಗೂ ಅದು ಅಗತ್ಯವೇ?

★★★

ಅಂದಹಾಗೆ, ಪಕ್ಕದ ಮನೆಯ ಹುಡುಗನ ಪ್ರಶ್ನೆಗೆ ಹೇಗೆ ಉತ್ತರಿಸುವುದೆಂಬ ಗೊಂದಲ ನನಗೆ. ಅಷ್ಟಕ್ಕೂ ಕವಿ ಆ ಸಾಲನ್ನು ಯಾವ ಅರ್ಥದಲ್ಲಿ ಬಳಸಿರಬಹುದು? 'ನಯ'ಕ್ಕೆ ನಿರ್ದಿಷ್ಟವಾಗಿ ರೇಷಿಮೆಯ ಹೋಲಿಕೆಯನ್ನೇ ನೀಡಿದ್ಯಾಕೆ? ಅಲ್ಲಿಯ ಪಾತರಗಿತ್ತಿಯನ್ನು ಚಿಟ್ಟೆ ಎನ್ನುವ ಅರ್ಥದಲ್ಲೇ ನೋಡಬೇಕೆ? ಇವನ್ನೆಲ್ಲ ಹುಡುಗನಿಗೆ ವಿವರಿಸುವುದಂತೂ ಸಾಧ್ಯವಿಲ್ಲ. ಮೊದಲೇ ತಲೆಹರಟೆ ಆತ. ಒಂದು ಪ್ರಶ್ನೆಗೆ ಸುಮ್ಮನಾಗುವವನೂ ಅಲ್ಲ. ಏನಾದರೊಂದು ಹಾರಿಕೆಯ ಉತ್ತರ ನೀಡಿ ನಯವಾಗಿ ತಳ್ಳಿಹಾಕಲೇ? ●